**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 07.07.2025.**

**ಮುಂದುವರೆದ ಪಾಟೀ ಸವಾಲು : ಶ್ರೀ ಎನ್.ಎನ್. ಆರೋಪಿ ಪರ ವಕೀಲರಿಂದ**

ವೇಣುರವರು ನನ್ನ ಸಹೋದರ. ವೇಣುರವರು ಚಿಕ್ಕಬಳ್ಳಾಪುರದ ಎಸ್.ಪಿ. ಕಛೇರಿಯ ಕಂಟ್ರೋಲ್ ರೂಮಿನಲ್ಲಿ ಮುಖ್ಯ ಪೇದೆಯಾಗಿ ಕಳೆದ 5 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಪಿ ಹಾಗೂ ವೇಣು ಒಂದು ಕಡೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರಿಬ್ಬರೂ ಆತ್ಮೀಯ ಸ್ನೇಹಿತರಾಗಿದ್ದು, ಪರಸ್ಪರ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ಅವರಿಬ್ಬರ ನಡುವೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿ. ಆರೋಪಿಗೆ ಹಣದ ಅವಶ್ಯಕತೆ ಇದ್ದಾಗೆ ಮನೆಗೆ ಬಂದು ತೆಗೆದುಕೊಂಡು ಹೋಗುತ್ತಿದ್ದರು. ಆರೋಪಿ ನನಗೆ ಪರಿಚಯವಿಲ್ಲ ಮತ್ತು ಈ ಚೆಕ್ಕಿನ ವ್ಯವಹಾರವನ್ನು ಆರೋಪಿಯು ನನ್ನ ಸಹೋದರನ ನಡುವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಾನು ಶಿಕ್ಷಕಿ ಎಂಬುವುದಕ್ಕೆ ದಾಖಲೆಗಳನ್ನು ನೀಡಿಲ್ಲ. ನಾನು ಶಿಕ್ಷಕಿ ವೃತ್ತಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ವೇಣುರವರು ಹಣ ನೀಡಿದ್ದು, ನಾನು ಆರೋಪಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ರೂ.5,00,000/- ಹಣ ನೀಡುವಷ್ಟು ನಾನು ಆರ್ಥಿಕ ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಾಗೇಪಲ್ಲಿ.